# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 391(477) |
| ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.03.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಅನುದಾನಿತ ಶಾಲೆಗಳೆಷ್ಟು; ಶೈಕ್ಷಣಿಕ ವರ್ಷದಲ್ಲಿ ಸಂಖ್ಯೆಯ ಕೊರತೆಯಿಂದ ಮುಚ್ಚಲು ಉದ್ದೇಶಿಸಿರುವ ಶಿಕ್ಷಣ ಸಂಸ್ಥೆಗಳೆಷ್ಟು;</td><td>ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಾಲೆಗಳ ವಿವರ
<table><tr><td>ಪ್ರಾಥಮಿಕ</td><td>ಪ್ರೌಢ</td></tr><tr><td>2608</td><td>3719</td></tr></table>
ಮುಚ್ಚಲು ಉದ್ದೇಶಿಸಿರುವ ಅನುದಾನಿತ ಖಾಸಗಿ ಶಾಲೆಗಳ ವಿವರ
<table><tr><td>ಪ್ರಾಥಮಿಕ</td><td>ಪ್ರೌಢ</td></tr><tr><td>22</td><td>29</td></tr></table>
</td></tr>
<tr><td>ಆ)</td><td>ಮುಚ್ಚಲು ನಿರ್ಧರಿಸಿದ್ದಲ್ಲಿ, ಆ ಸಂಸ್ಥೆಗಳ ಕಟ್ಟಡ ಮತ್ತು ಜಮೀನನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ;</td><td>ಸದರಿ ಸಂಸ್ಥೆಗಳ ಕಟ್ಟಡ / ಜಮೀನನ್ನು ಸರ್ಕಾರದಿಂದ ನೀಡಿದ ಅನುದಾನದಿಂದ ಪಡೆದಿದ್ದಲ್ಲಿ ಹಾಗೂ ಸರ್ಕಾರದಿಂದ ಆಡಳಿತ ಮಂಡಳಿಗೆ ಶೈಕ್ಷಣಿಕ ಉದ್ದೇಶಕ್ಕೆ ವರ್ಗಾಯಿಸಿದ ಕಟ್ಟಡ / ಜಮೀನು ಆಗಿದ್ದಲ್ಲಿ ಶೈಕ್ಷಣಿಕೇತರ ಉದ್ದೇಶಕ್ಕೆ ಬಳಸಲು / ಹಸ್ತಾಂತರಿಸಲು ಸರ್ಕಾರದ ಅನುಮತಿ ಪಡೆಯಬೇಕಾಗಿರುತ್ತದೆ.<br>ಸದರಿ ಸಂಸ್ಥೆಗಳ ಶಾಲಾ ಜಮೀನು / ಕಟ್ಟಡ ಶಾಲಾ ಆಡಳಿತ ಮಂಡಳಿಗೆ ಸೇರಿದ ಸ್ವಂತ ಸ್ವತ್ತಾಗಿದ್ದಲ್ಲಿ ಈ ಕುರಿತು ಶಾಲಾ ಆಡಳಿತ ಮಂಡಳಿಯು ನಿರ್ಣಯವನ್ನು ತೆಗೆದುಕೊಳ್ಳುತ್ತದೆ.</td></tr>
</table>

| | | |
|---|---|---|
| ಇ) | ಮುಚ್ಚಿದ್ದಲ್ಲಿ, ಅಲ್ಲಿಯ ಶಿಕ್ಷಕರನ್ನು ಎಲ್ಲಿಗೆ ವರ್ಗಾವಣೆ ಮಾಡಲು ಉದ್ದೇಶಿಸಲಾಗಿದೆ; ಅವರ ವೇತನ ಭತ್ಯೆ ಬಾಕಿಗಳನ್ನು ಹೇಗೆ ಪರಿಗಣಿಸಲಾಗುತ್ತದೆ? (ಮಾಹಿತಿ ನೀಡುವುದು) | • ಸರ್ಕಾರದ ಪತ್ರ ಸಂಖ್ಯೆ:ಇಡಿ 46 ಎಸ್‌ಇಡಬ್ಲ್ಯೂ 2013, ದಿನಾಂಕ:28.02.2023ರಂತೆ ಹೆಚ್ಚುವರಿ ಶಿಕ್ಷಕರು ಇತರೆ ಶಾಲಾ ಆಡಳಿತ ಮಂಡಳಿಯ ಒಪ್ಪಿಗೆಯನ್ನು ಪಡೆದು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳಿಗೆ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿದ ಶಿಕ್ಷಕರ ಸ್ಥಳ ನಿಯುಕ್ತಿಯನ್ನು ಅನುಮೋದಿಸಲಾಗುತ್ತಿದೆ.<br>• ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕೊರತೆಯಿಂದ ಶೂನ್ಯ ಶಾಲೆಗಳಾದ ಸಂದರ್ಭದಲ್ಲಿ ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಅಗತ್ಯವಿರುವ ಅನುದಾನಿತ ಶಾಲೆಗಳಿಗೆ ತಾತ್ಕಾಲಿಕವಾಗಿ ವರ್ಕಿಂಗ್ ಅರೇಂಜ್‌ಮೆಂಟ್ ಮಾಡಿ ವೇತನ ಸೌಲಭ್ಯಗಳನ್ನು ನೀಡಲು ಸೂಚಿಸಲಾಗಿದೆ. |

ಸಂಖ್ಯೆ: ಇಪಿ 76 ಪಿಎಂಸಿ 2025

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು